# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 249(232)
ಸದಸ್ಯರ ಹೆಸರು : ಶ್ರೀ ಹೆಚ್.ಪಿ.ಸುಧಾಮ್ ದಾಸ್(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 06.03.2025
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ನಿವೃತ್ತ ಸರ್ಕಾರಿ ನೌಕರರನ್ನು ಸರ್ಕಾರಿ ಸೇವೆಗೆ ನಿಯೋಜಿಸುವುದನ್ನು ನಿರ್ಬಂಧಿಸಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ;</td><td rowspan="2">ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 15ರನ್ವಯ ಸರ್ಕಾರದ ಇಲಾಖೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ. ಸದರಿ ನಿಯಮಗಳ ನಿಯಮ 15(1)(ಎ)ರನ್ವಯ ಸರ್ಕಾರದ, ಕೇಂದ್ರ ಸರ್ಕಾರ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದ ಸೇವೆಯಿಂದ ನಿವೃತ್ತನಾಗಿರುವ ಯಾರೇ ವ್ಯಕ್ತಿಯನ್ನು ಅವಶ್ಯಕವಾಗಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಅವಧಿಯವರೆಗೆ ಮತ್ತು ಸಮಾಲೋಚನೆಯು ಅವಶ್ಯವಿರುವಲ್ಲಿ ಆಯೋಗದೊಂದಿಗೆ ಸಮಾಲೋಚನೆ ಮಾಡಿದ ನಂತರ ಸೇವೆಗೆ ಅಥವಾ ಹುದ್ದೆಗೆ ನೇಮಕ ಮಾಡಬಹುದಾಗಿದೆ.<br><br>ಮೇಲ್ಕಂಡ ನಿಯಮಗಳ ನಿಯಮ 15(1)(ಬಿ) ರನ್ವಯ ಒಪ್ಪಂದದ ಮೂಲಕ ನಿರ್ಧರಿಸಬಹುದಾದ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥನಾಗಿರುವನೆಂದು ಅದು ಅಭಿಪ್ರಾಯಪಡುವ ಯಾರೇ ವ್ಯಕ್ತಿಯನ್ನು ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲವಾದಾಗ, ಇಲಾಖಾ ಮುಖ್ಯಸ್ಥರ ಹುದ್ದೆಗೆ, ತಾಂತ್ರಿಕ ಅರ್ಹತೆಯು ಅಗತ್ಯವಿರುವ ಹುದ್ದೆಗಳಿಗೆ ಹಾಗೂ ಸಚಿವರ, ರಾಜ್ಯ ಸಚಿವರ ಅಥವಾ ಉಪಸಚಿವರ ಆಪ್ತ ಸಿಬ್ಬಂದಿ ಶಾಖೆಯಲ್ಲಿನ ಹುದ್ದೆಗಳಿಗೆ ನೇಮಕ ಮಾಡಲು ಆಸ್ಪದ ಕಲ್ಪಿಸಲಾಗಿದೆ. ನಿಯಮ 15(2)ರಲ್ಲಿ ತಿಳಿಸಿರುವಂತೆ 15(1)(ಬಿ)ರ ಅಡಿಯಲ್ಲಿನ ಯಾರೇ ವ್ಯಕ್ತಿಯ ನೇಮಕದ ಒಟ್ಟು ಅವಧಿ ಅಥವಾ ಯಾವುದೇ ಹುದ್ದೆಯಲ್ಲಿ ನೇಮಕದ ಒಟ್ಟು ಅವಧಿ ಐದು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಿಳಿಸಲಾಗಿದೆ.<br><br>ದಿನಾಂಕ:23.12.1994 ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 15 ಎಸ್‌ಡಿಇ 94 ರನ್ವಯ ಮತ್ತು ದಿನಾಂಕ:29.02.2016ರ ಸುತ್ತೋಲೆ ಸಂಖ್ಯೆ: ಸಿಆಸುಇ 588 ಸೇನನಿ 2015 ರನ್ವಯ ನಿವೃತ್ತಿ ಹೊಂದಿದ ನೌಕರರನ್ನು ಪುನರ್‌ನೇಮಕ ಮಾಡುವಂತಿಲ್ಲ. ಇದು ಸರ್ಕಾರದ ನೀತಿಯಾಗಿರುತ್ತದೆ. ದಿನಾಂಕ:02.03.2016ರ ಸಮಸಂಖ್ಯೆಯ ಸುತ್ತೋಲೆಯಲ್ಲಿ ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರನ್ವಯ ಸಚಿವ ಸಂಪುಟದ ಅನುಮೋದನೆ ಪಡೆದು ಪುನರ್‌ನೇಮಕಗೊಂಡ ನೌಕರರ/ಅಧಿಕಾರಿಗಳ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ ಎಂಬುದಾಗಿ ಸ್ಪಷ್ಟಪಡಿಸಿದೆ.</td></tr>
<tr><td>ಆ) ನಿರ್ಬಂಧದ ಆದೇಶದ ತರುವಾಯ ನಿವೃತ್ತಿ ನಂತರವೂ ಸರ್ಕಾರ ಸೇವೆಗೆ ನಿಯೋಜಿಸಲಾಗಿರುವ ಸರ್ಕಾರಿ ನೌಕರರುಗಳ/ಅಧಿಕಾರಿಗಳ ಸಂಖ್ಯೆ ಎಷ್ಟು? (ಪ್ರತಿಯೊಬ್ಬ ಅಧಿಕಾರಿಯ ವಿವರ ಹಾಗೂ ನಿಯೋಜಿಸಲಾದ ಹುದ್ದೆಯ ವಿವರ ಒದಗಿಸುವುದು)</td></tr>
</table>

| | |
|---|---|
| | ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯ, ಮಾನ್ಯ ಉಪಮುಖ್ಯಮಂತ್ರಿಯವರ ಕಛೇರಿ, ಮಾನ್ಯ ಸಚಿವರುಗಳ ಕಛೇರಿ, ನಿಗಮ/ಮಂಡಳಿಗಳ ಅಧ್ಯಕ್ಷರುಗಳ ಕಛೇರಿ ಹಾಗೂ ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ/ಆರ್ಥಿಕ ಸಲಹೆಗಾರರು, ದೆಹಲಿ ಪ್ರತಿನಿಧಿ, ಮಾಧ್ಯಮ ಸಲಹೆಗಾರರು, ಆಪ್ತ ಶಾಖೆಯಲ್ಲಿನ ಹುದ್ದೆಗಳು ಖಾಯಂ ಹುದ್ದೆಗಳಾಗಿರುವುದಿಲ್ಲ ಹಾಗೂ ಈ ಹುದ್ದೆಗಳಿಗೆ ಯಾವುದೇ ನೇರ ನೇಮಕಾತಿ ಇರುವುದಿಲ್ಲ. ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) (ತಿದ್ದುಪಡಿ) ನಿಯಮಗಳು, 2020, ದಿನಾಂಕ: 03-04-2020 ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 1 ಎಆರ್‌ಬಿ 2020ರನ್ವಯ ಮಾನ್ಯ ಸಚಿವರುಗಳ ಆಪ್ತ ಶಾಖೆಯಲ್ಲಿನ ಮಂಜೂರಾದ ಹುದ್ದೆಗಳ ಎದುರಿಗೆ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರನ್ನು ಗುತ್ತಿಗೆ ಆಧಾರದ ಮೇಲೆ ಮರುನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆಯ ಅಗತ್ಯವಿರುವುದಿಲ್ಲ ಎಂದು ಸೂಚಿಸಿದೆ.<br><br>ಆದ್ದರಿಂದ, ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 15(1)(ಬಿ)(iii)ರನ್ವಯ ಈ ಹುದ್ದೆಗಳಿಗೆ ನಿವೃತ್ತ ಸರ್ಕಾರಿ ನೌಕರರನ್ನು ನೇಮಕ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಆರ್ಥಿಕ ಇಲಾಖೆಯು ನೀಡುವ ಷರತ್ತು ಮತ್ತು ನಿಬಂಧನೆಗಳೊಂದಿಗೆ ಸಚಿವ ಸಂಪುಟದ ಅನುಮೋದನೆ ಪಡೆದು ನೇಮಕ ಮಾಡಲಾಗುತ್ತದೆ. ಈ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ನಿವೃತ್ತ ಸರ್ಕಾರಿ ನೌಕರರು ಸಚಿವರ ಪದಾವಧಿಯವರೆಗೆ ಮಾತ್ರ ಕಾರ್ಯನಿರ್ವಹಿಸಿ, ಪದಾವಧಿಯು ಮುಗಿದ ನಂತರ ಸದರಿ ಹುದ್ದೆಗಳಿಂದ ಅವರನ್ನು ಬಿಡುಗಡೆಗೊಳಿಸಲಾಗುತ್ತದೆ. |

**ಸಂಖ್ಯೆ: ಸಿಆಸುಇ 47 ಸೇಸನಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ